# Netaji Subhas Chandra Bose
# 122nd Birth Anniversary Celebration



ದಿನಾಂಕ: ೨೩/೦೧/೨೦೧೯ ರಂದು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾಲೇಜಿನ ವತಿಯಿಂದ ಸ್ವಚ್ಛ ಸರ್ವೇಕ್ಷನ್ ೨೦೧೯ ರ ಪ್ರಯುಕ್ತ ಶ್ರೀ.ಸುಭಾಷ್‌ಚಂದ್ರಬೋಸ್ ರವರ ೧೨೨ ನೇ ಜನ್ಮ ದಿನದ ಅಂಗವಾಗಿ ನಮ್ಮ ಕಾಲೇಜಿನ ಮುಂಭಾಗದ ಆರ್.ಎಂ.ಸಿ ಬಸ್‌ಸ್ಟ್ಯಾಂಡ್ ಮತ್ತು ಲಾರಿ ಸ್ಟ್ಯಾಂಡ್‌ಗಳಲ್ಲಿ ಸ್ವಚ್ಚತಾ ಕಾರ್ಯಕ್ರಮವನ್ನು ಕಾಲೇಜಿನ ಎನ್.ಎಸ್.ಎಸ್ ಮತ್ತು ಎನ್.ಸಿ.ಸಿ ವತಿಯಿಂದ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಮೈಸೂರು ನಗರ ಪಾಲಿಕೆಯ ವಾರ್ಡ್ ನಂ ೨೪ ರ ಸದಸ್ಯ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರಾದ ರಮೇಶ್.ಆರ್ ರವರು, ಕಿರಿಯ ಆರೋಗ್ಯ ನಿರಿಕ್ಷಿಕರಾದ ಜಯಂತಿರವರು, ವಾರ್ಡ್ ನಂ. ೪೦ ರ ಕಿರಿಯ ಆರೋಗ್ಯ ನಿರಿಕ್ಷಿಕರಾದ ಶ್ರೀ.ಮಂಜುನಾಥ್.ಡಿ.ಕೆ ರವರು, ವಾರ್ಡ್ ನಂ ೪೧ ರ ಮೇಸ್ತ್ರಿ ಸಲೀಂರವರು ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರವರು, ವಾಣಿಜ್ಯ ಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರಾದ ಪ್ರೊ.ಹೆಚ್.ಜೆ.ಚಂದ್ರಶೇಖರವರು, ಎನ್.ಸಿ.ಸಿ ಅಧಿಕಾರಿಗಳಾದ ಕ್ಯಾಪ್ಟನ್ ಶೀಹರ್ಷ.ಬಿ.ಎಸ್.ರವರು ಎನ್.ಎಸ್.ಎಸ್ ಅಧಿಕಾರಿಗಳಾದ ಡಾ.ಬಿ.ಟಿ.ರಘುರವರು ಮತ್ತು ವಾಣಿಜ್ಯ ಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಪ್ರೊ.ಪಿ.ಕೆ.ಗೋವರ್ಧನ್ ರವರು ಹಾಗೂ ಎನ್.ಎಸ್.ಎಸ್ ಮತ್ತು ಎನ್.ಸಿ.ಸಿ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

Vidyavardhaka First Grade College, Mysuru – Events, Special Talks, Seminars and Activities page




























